ಧಾರವಾಡ ಜಿಲ್ಲೆಯಲ್ಲಿ ಖಾಲಿ ಇರುವ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಗಳು

2878 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಖಾಲಿ ಇರುವ ಮಹಿಳಾ ವೈಧ್ಯಾಧಿಕಾರಿಗಳ ಹುದ್ದೆಗಳು ಎಷ್ಟು? ಅವು ಯಾವುವು, ಹಾಗೂ ಎಂದಿನಿದ ಖಾಲಿ ಇವೆ?

ಆ) ಅವುಗಳನ್ನು ತುಂಬಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಧಾರವಾಡ ಜಿಲ್ಲೆಯಲ್ಲಿ 16 ಮಹಿಳಾ ವೈಧ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇದ್ದವು. ಇವುಗಳಲ್ಲಿ 10 ಹುದ್ದೆಗಳನ್ನು ಇತ್ತೀಚೆಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಯಾದ ಅಭ್ಯರ್ಥಿಗಳಿಂದ ತುಂಬಲಾಗಿದೆ. ಉಳಿದ 6 ಹುದ್ದೆಗಳಲ್ಲಿ 3 ಹುದ್ದೆಗಳು ಕಳೆದ 2 ವರ್ಷಗಳಿಂದ, 2 ಹುದ್ದೆಗಳು ಕಳೆದ ಒಂದು ವರ್ಷದಿಂದ ಹಾಗೂ ಒಂದು ಹುದ್ದೆಯು ಕಳೆದ ಎರಡು ತಿಂಗಳಿಂದ ಖಾಲಿ ಇರುತ್ತವೆ.

ಆ) ಈ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಬಾದಾಮಿ ತಾಲ್ಲೂಕಿನಲ್ಲಿ ಅರಣ್ಯ ಭೂಮಿ ಒತ್ತುವರಿ

2879 - ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ತಾಲ್ಲೂಕಿನಲ್ಲಿ27.4.1997ಕ್ಕಿಂತ ಮುಂಚೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿರುವ ರೈತರುಗಳ ಸಂಖ್ಯೆ ಎಷ್ಟು? (ಕ್ಷೇತ್ರ ಹಾಗೂ ಪ್ರತಿ ಗ್ರಾಮವಾರು ವಿವರ ನೀಡುವುದು)

ಆ) ಸರ್ಕಾರದ ಆದೇಶದನ್ವಯ ಎಷ್ಟು ರೈತರಿಗೆ ಅರಣ್ಯ ಭೂಮಿಯನ್ನು ಸಕ್ರಮಗೊಳಿಸಲಾಗಿದೆ?

ಇ) ಹಾಗಿದ್ದಲ್ಲಿ ಸಕ್ರಮಗೊಳಿಸಲು ಶೀಘ್ರವಾಗಿ ಸರ್ಕಾರದ ಕ್ರಮ ಕೈಗೊಳ್ಳತ್ತಿದೆಯೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

ಅ) ದಿನಾಂಕ 27.4.78 ರಿಂದ 27.4.97ರ ವರೆಗೆ ರೈತರು ಅರಣ್ಯ ಜಮೀನನ್ನು ಒತ್ತುವರಿ ಮಾಡಿರುವುದಿಲ್ಲ. ಆದರೆ ಈ ತಾಲ್ಲೂಕಿನಲ್ಲಿ ದಿನಾಂಕ 27.4.78ಕ್ಕಿಂತ ಮುಂಚೆ ಅರಣ್ಯ ಜಮೀನನ್ನು ಒತ್ತುವರಿ ಮಾಡಿರುವ ರೈತರುಗಳ ಸಂಖ್ಯೆ 295. ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಆ) ಕೇಂದ್ರ ಸರ್ಕಾರವು ತಮ್ಮ ಪತ್ರ ಸಂಖ್ಯೆ 8-59:95 ಎಫ್‌ಸಿ, ದಿನಾಂಕ 15.5.96ರಲ್ಲಿ ನೀಡಿರುವ ಅನುಮೋದನೆಯನ್ನು ಮತ್ತು ರಾಜ್ಯ ಸರ್ಕಾರವು ಸಂಖ್ಯೆ ಅಪಜೀ 5 ಎಫ್‌ಜಿಎಲ್ 90 ದಿನಾಂಕ 5.5.97ರಲ್ಲಿ ಹೊರಡಿಸಿರುವ ಆದೇಶಗಳ ಪ್ರಕಾರ ಕೇಂದ್ರ ಸರ್ಕಾರ ವಿಧಿಸಿದ

ನಿಬಂಧನೆಗಳನ್ನೊಳಗೊಂಡು ಮತ್ತು ಇತರೆ ಷರತ್ತುಗಳನ್ನು ಕೂಡಾ ವಿಧಿಸಿ ಸಕ್ರಮಗೊಳಿಸಿ ರೈತರಿಗೆ ಪಟ್ಟಾ ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಿದೆ. ಅದರಂತೆ, ಬಾದಾಮಿ ತಾಲ್ಲೂಕಿಗೆ ಸಂಬಂಧಿಸಿದೆ 295 ಪ್ರಕರಣಗಳ ಬಗ್ಗೆ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳಬೇಕಾಗಿದೆ.

೫) ಹೌದು. ಈ ಮೇಲಿನಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಬಾಗಲಕೋಟೆ ವಿಭಾಗದ (ವಿಜಾಪುರ ಜಿಲ್ಲೆ) ಬಾದಾಮಿ ತಾಲ್ಲೂಕಿನಲ್ಲಿ ದಿನಾಂಕ 27.4.1978ಕ್ಕಿಂತ ಪೂರ್ವದಲ್ಲಿ ಅರಣ್ಯ ಜಮೀನಿನಲ್ಲಿ ಒತ್ತುವರಿ ಮಾಡಿದ ವಿವರ :

ಕ್ರಮ ಸಂಖ್ಯೆ	ಗ್ರಾಮದ ಹೆಸರು	ಅತಿ ಕ್ರಮಣದಾರರ ಸಂಖ್ಯೆ	ಅತಿ ಕ್ರಮಣ ಮಾಡಿದ ಕ್ಷೇತ್ರದ ವಿಸ್ತೀರ್ಣ
1.	ಹಾನಾಪುರ	43	192.00
2.	ಮುರಡಿ	6	28.00
3.	ತುಗನಸಿ	4	14.00
4.	ಲಾಯದಗುಂದಿ	3	7.00
5.	ಹಂಸನೂರ	10	73.00
6.	ಹಲಗೇರಿ	10	28.00
7.	ಹುಲ್ಲಿಕೇರಿ	17	66.20
8.	ಉಗಲವಾಟ	5	10.00
9.	ತಪಸಕಟ್ಟಿ	6	17.15
10.	ಮುಸ್ಪಿಗೇರಿ	6	30.00
11.	ಕಟಗಿನಹಳ್ಳಿ	2	10.00
12.	ಪರ್ವತಿ	1	5.00
13.	ಕೊಟ್ನಳ್ಳಿ	1	4.00
14.	ಹಾನಾಪುರ	2	5.00
15.	ಹೊಸುರ	10	26.20
16.	ಹಿರೇನಸಬಿ	12	28.20
17.	ಶಿವಪೂರ	5	23.00
18.	ಹನುಮನೇರಿ	11	54.39
19.	ಪಕೀರಬೂದಿಹಾಳ	9	16.00
20.	ಕಲಬಂದಕೇರಿ	27	30.16

1	2	3	4
21.	ಕೆರೂರ	18	77.17
22.	ಹೊಲಗೇರಿ	04	2.88
23.	ಹರಡೋಹಳ್ಳಿ	1	4.00
24.	ಕೆಂದೂರ	5	22.05
25.	ಕಬ್ಬಳಗೇರಿ	3	15.00
26.	ಬಾದಾಮಿ	5	20.00
27.	ಬಿಡರಬೂದಿಹಾಳ	2	6.00
28.	ಕುಟಗನಕೇರಿ	6	22.00
29.	ನಾಗರಾಳ	3	16.00
30.	ಮಲ್ಲಾಪೂರ	1	5.00
31.	ಅನವಾಲ	5	12.35
32.	ನಂದಿಕೇಶ್ವರ	13	48.30
33.	ಜಾಳಿಹಾಳ	11	28.00
34.	ಬೆಲೂರ	7	1.39
35.	ಬಿ.ಎನ್. ಹಾಲಿಹಾಳ	2	6.00
36.	ಮಂಗಳೂರು	2	2.00
37.	ನಸಗುನಿ	1	3.00
38.	ಜೊಳ್ಳಗುಡ್ಡ	1	0.20
39.	ಅನಂತಗಿರಿ	1	4.00
40.	ಶಿರಬಡಗಿ	1	4.00
41.	ಮಳಗಿ	1	8.00
42.	ಕಗಲಗುಂಬ	1	5.00
43.	ನೀರಲಕೇರಿ	1	0.17
44.	ಕಲ್ಲಾಪೂರ	1	10.00
45.	ಮತ್ತಿಕಟ್ಟಿ	6	19.20
46.	ನೀಲಗುಂದ	1	1.00
47.	ಕಳಸ	2	1.24
		295	**1012.25**